I am producing unopened RPAD cover issued to K.Tyagaraja which was returned as "left the address", RPAD cover opened in the open court in front of the witness and plaintiff and defendant counsels and found original notice dated 31.05.2018 and notice is marked as **Ex.P.7** and RPAD cover is marked as **Ex.P.7(a)**.

(Defendant counsel prays time for cross examination. Time granted).

(Computerized to my dictation in the open court as deposed by the witness.)

**R. O. I. & A. C.,**

**(MAMTAZ)**
**IX Addl. C.C. & S.J., Bengaluru.**

**ದಿಃ-15-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು ಃ ಪ್ರತಿವಾದಿಗಳ ಪರ ಶ್ರೀ. ಸಿ.ಪಿ ವಕೀಲರಿಂದ ಃ**

1. ನಾನು ಹುಟ್ಟಿ ಬೆಳೆದಿದ್ದೆಲ್ಲಾ ನಾನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತೋರಿಸಿದ ವಿಳಾಸದಲ್ಲಿ ಆಗಿರುತ್ತದೆ. ಈಗಲೂ ಸಹ ನಾನು ಅಲ್ಲಿಯೇ ವಾಸವಿದ್ದೇನೆ. ನನಗೆ 40 ವರ್ಷಗಳಿಂದ ವಾದಿಯವರ ಪರಿಚಯವಿದೆ.

2. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಖಂಡಿಕೆ 3 ರಲ್ಲಿ ತಿಳಿಸಿದಂತೆ ಪತ್ರವನ್ನು ನೋಡಿರುತ್ತೇನೆ ಆದರೆ ಯಾವ ದಿನಾಂಕ, ತಿಂಗಳು, ವರ್ಷ ಗೊತ್ತಿರುವುದಿಲ್ಲ. ವೇದಾಚಲಂರವರು ರೂ.5,00,000/- ಮುಂಗಡವನ್ನು ನೀಡಿ ಅಲ್ಲಿ ವ್ಯವಹಾರ ಮಾಡುತ್ತಿದ್ದರು. ಆ ಪತ್ರವನ್ನು ನಾನು ನೋಡಿದ್ದೇನೋ ಇಲ್ಲವೋ ನನಗೆ ಗೊತ್ತಿಲ್ಲ. ಆ ಪತ್ರ ವೇದಾಚಲಂರವರ ಬಳಿ ಇರಬಹುದು. ಆ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಬಲ್ಲೆ.

3. ವಕೀಲರಾದ ಧನರಾಜ್ ರವರ ಪರಿಚಯ ನನಗೆ ಇದೆ. ಧನರಾಜ್ ರವರು ನನಗೆ 20 ವರ್ಷಗಳಿಂದ ಪರಿಚಯವಿರುತ್ತಾರೆ. ಧನರಾಜ್ ರವರ ಮೇಲೆ ಒಂದು ಪ್ರಕರಣವನ್ನು ದಾಖಲಿಸಿ ನ್ಯಾಯಾಲಯದ ಆದೇಶದಂತೆ ಅವರು ವಾದ ಪತ್ರದ ಸ್ವತ್ತಿನಿಂದ ಹೊರ ಹೋಗಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಧನರಾಜ್ ರವರ ಮೇಲೆ ಶಶಿಕಲಾರವರೇ ಪ್ರಕರಣ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

4. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ಎಲ್ಲರೂ ವೇದಾಚಲಂರವರನ್ನು ಭೇಟಿಯಾಗಿ ವೈದ್ಯಕೀಯ ನಿಲುವಿಗೆ ಮತ್ತು ಕಾನೂನಿನ ಪ್ರಕ್ರಿಯೆಗಳಿಗೆ ಹಣದ ಅವಶ್ಯಕತೆ ಇದೆ ಎಂದು ನಾನು ನಮೂದಿಸಿದ್ದು ಆ ಬಗ್ಗೆ ಏನು ಹಣದ ಅವಶ್ಯಕತೆ ಇತ್ತು ಎಂದರೆ ಬಾಬು ಎನ್ನುವ ಬಾಡಿಗೆದಾರರಿಗೆ ಮುಂಗಡ ಹಣವನ್ನು ವಾಪಾಸು ನೀಡಬೇಕಿತ್ತು ಮತ್ತು ವೈದ್ಯಕೀಯ ಅವಶ್ಯಕತೆ

ಏನೆಂದು ನನಗೆ ಗೊತ್ತಿಲ್ಲ. ಆದರೆ ಅವರಿಗೆ ಅದಕ್ಕೆ ಹಣದ ಅವಶ್ಯಕತೆ ಇತ್ತು ಎಂದು ನುಡಿಯುತ್ತಾರೆ.

5. ವೇದಾಚಲಂ ಮತ್ತು ಧನರಾಜ್ ರವರಿಗೆ ಪರಿಚಯವಿತ್ತು ಎಂದರೆ ಸರಿ. ಅವರ ನಡುವೆ ಯಾವುದೇ ಹಣದ ವ್ಯವಹಾರಗಳು ಇರಲಿಲ್ಲ. ಆದರೆ ವೇದಾಚಲಂರವರು ಧನರಾಜ್ ರವರಿಗೆ ಅಲ್ಲಿ ಇರಲು ಟೇಬಲ್ ಮತ್ತು ಕುರ್ಚಿಯನ್ನು ನೀಡಿದ್ದರು ಎಂದು ನುಡಿಯುತ್ತಾರೆ.

6. ಧನರಾಜ್ ರವರನ್ನು ನ್ಯಾಯಾಲಯದ ಆದೇಶದಂತೆ ಖಲ್ಲಾ ಮಾಡಿದ ಬಗ್ಗೆ ವೇದಾಚಲಂರವರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಾವು ಕೇಳಿಕೊಂಡಂತೆ ಧನರಾಜ್ ರವರು ಸ್ವತ್ತನ್ನು ಬಿಟ್ಟು ಹೋಗಿರುತ್ತಾರೆ. ರೂ.5,00,000/-ವನ್ನು 1 ನೇ ಪ್ರತಿವಾದಿಯವರಿಗೆ ಯಾವಾಗ ವಾದಿಯವರು ಕೊಟ್ಟಿದ್ದಾರೆ ಎಂದು ನೆನಪಿಲ್ಲ. ರೂ.5,00,000/- ಆ ಸಮಯದಲ್ಲಿ ವೇದಾಚಲಂರವರ ಬಳಿ ಇತ್ತು ಎಂದು ತೋರಿಸಲು ಯಾವ ದಾಖಲೆಗಳನ್ನು ಇಟ್ಟಿದ್ದರು ಎಂದು ನನಗೆ ಗೊತ್ತಿಲ್ಲ.

7. ಬಾಬುರವರು 2009 ರಲ್ಲಿ ವಾದ ಪತ್ರದ ಸ್ವತ್ತಿನ ಒಂದು ಭಾಗಕ್ಕೆ ಬಂದಿರುತ್ತಾರೆ. ಬಾಬುರವರು ಅಲ್ಲಿ ಬಂದು ಇದ್ದ ಬಗ್ಗೆ ತೋರಿಸಲು ನಮ್ಮ ಹತ್ತಿರ ಪತ್ರವಿದೆ. ಅದನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ಸಾಕ್ಷಿ ಮುಂದುವರಿದು ಅವರು

ಸಾಕ್ಷಿದಾರರಾಗಿ ಈ ಪ್ರಕರಣಕ್ಕೆ ಬರಲು ತಯಾರಿದ್ದಾರೆ ಎಂದು ನುಡಿಯುತ್ತಾರೆ. 2015 ರಲ್ಲಿ ಅವರು ನೀಡಿದಂತಹ ರೂ.4,00,000/- ದುಡ್ಡನ್ನು ವೆಂಕಟಾಚಲಂರವರಿಂದ ವಾಪಾಸು ಪಡೆದು ತಾನಿದ್ದ ವಾದ ಪತ್ರದ ಸ್ವತ್ತಿನ ಭಾಗವನ್ನು ಬಿಟ್ಟುಕೊಟ್ಟು ಹೋಗಿರುತ್ತಾರೆ.

8. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ರೂ.2,25,000/- ನಗದನ್ನು ಪ್ರತಿವಾದಿ ನಂ.1 ಮತ್ತು 2 ರವರಿಗೆ ನೀಡಿದ್ದೇನೆ ಎಂದು ತಿಳಿಸಿದ್ದು ಅಷ್ಟು ಹಣ ನನ್ನ ಬಳಿ ಇತ್ತು ಎಂದು ತೋರಿಸಲು ಕಾಗದ ಪತ್ರಗಳು ಇಲ್ಲ. ಆದರೆ ದುಡ್ಡನ್ನು ನೀಡಿರುತ್ತೇನೆ.

9. ವೇದಾಚಲಂರವರು ಕಳೆದ 40 ವರ್ಷಗಳಿಂದ ಆದಾಯ ತೆರಿಗೆ ಪಾವತಿದಾರರಾಗಿದ್ದಾರೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವೇದಾಚಲಂರವರ ಹಣದ ವ್ಯವಹಾರಗಳ ಬಗ್ಗೆ ಬರೆದಿದ್ದು ಅದನ್ನು ತೋರಿಸಲು ಆದಾಯ ತೆರಿಗೆಯಲ್ಲಿ ರೂ.5,00,000/-, ರೂ.4,00,000/- ಮತ್ತು ರೂ.2,25,000/- ನಮೂದು ಇದ್ದ ಬಗ್ಗೆ ತೋರಿಸಬಹುದೇ ಎಂದರೆ ಸಾಕ್ಷಿಯು ಅದು ನಮೂದಾಗಿದೆಯೇ ಇಲ್ಲವೇ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರು ಆದಾಯ ತೆರಿಗೆ ಪಾವತಿ ಮಾಡಿದ ಬಗ್ಗೆ ಕಳೆದ 40 ವರ್ಷಗಳ ದಾಖಲೆಯನ್ನು ಹಾಜರುಪಡಿಸಬಹುದು.

10. ನಿ.ಪಿ.1 ರಲ್ಲಿ ನಮೂದಿಸಿದಂತೆ ವಾದಿಯವರಿಗೆ ನ್ಯಾಯಾಲಯಕ್ಕೆ ಬರದಷ್ಟು ಏನು ಅನಾರೋಗ್ಯವಿದೆ ಎಂದರೆ

ಸಾಕ್ಷಿಯು ಅವರಿಗೆ ಕಿಡ್ನಿ ಸಮಸ್ಯೆ ಇದೆ, ಕಾಲಿನಲ್ಲಿ ಊತ ಬರುತ್ತದೆ, ಸಕ್ಕರೆ ಕಾಯಿಲೆ ಮತ್ತು ಬಿಪಿ ಇದೆ ಎಂದು ನುಡಿಯುತ್ತಾರೆ. ಇವುಗಳ ಬಗ್ಗೆ ವೈದ್ಯಕೀಯ ದಾಖಲೆಯನ್ನು ಅವರಿಂದ ಪಡೆದು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

11. ನಿ.ಪಿ.2 ಕರಾರು ಪತ್ರವನ್ನು ಮಾಡುವಾಗ ಅದಕ್ಕೆ ಸಾಕ್ಷಿದಾರರಾಗಿ ಧನರಾಜ್ ರವರು ಸಹಿ ಹಾಕಿರುವುದು ನೆನಪಿದೆ. ಉಳಿದವರು ಯಾರು ಹಾಕಿದ್ದಾರೆ ಎಂದು ನನಗೆ ಈಗ ನೆನಪಿಲ್ಲ. ನಿ.ಪಿ.2 ನ್ನು ಮಾಡುವ ಸಂದರ್ಭದಲ್ಲಿ ನಾನು ಆ ದಿನ ಹಾಜರಿರಲಿಲ್ಲ.

12. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರಿಸುವಾಗ ವಕೀಲರಾದ ಮಂಜುನಾಥ್, ವೇದಾಚಲಂ ಮತ್ತು ನಾನು ಇದ್ದೆವು.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**